Amount provided for Constructing Houses in Belli Betta Agricultural Colony in Krishnarajapet Taluk.

*Q.—42. Sri N. NANJE GOWDA (Krishnarajpet).—

Will the Government be pleased to state.—

(*a*) the amount provided for the construction of houses in Belli Betta Agricultural Colony, Krishnarajpet Taluk;

(*b*) the extent of dry and wet lands provided to the above colony;

(*c*) if the lands are alienated to others, the action taken by them against those who have alienated their lands;

(*d*) the number of pairs of bullocks supplied to this colony and the number of cultivators residing in the colony;

(*e*) the other facilities provided to this colony and whether the same have been utilised properly ?

*A.—Smt. YASHODARA DASAPPA (Minister for Social Welfare).—

(*a*) Rs. 3,289.62 nP.

(*b*) 304 acres of dry land.

(*c*) The lands are not alienated.

(*d*) 59 pairs of bullocks have been supplied to the colonists; 39 cultivators are residing in the colony.

(*e*) Agricultural implements such as iron ploughs, cultivators' pickaxes and mumties have been provided to the colonists and they have been utilised properly. Besides, a Community Centre Building and a Drinking Water Well have been provided to the colonists.

ಶ್ರೀ ಎನ್. ನಂಜೇಗೌಡ.—ಈ ಕಾಲೊನಿಗೆ ಎಷ್ಟು ಮನೆಗೆ ಗ್ರಾಂಟ್ ಕೊಟ್ಟಿದ್ದೀರಿ ?

†ಶ್ರೀಮತಿ ಯಶೋಧರ ದಾಸಪ್ಪ.—59 ಸಂಸಾರಕ್ಕೆ ಬೇಕೆಂದು ಗ್ರಾಂಟ್ ಕೊಟ್ಟಿರುವುದು, ಒಟ್ಟು 40,355 ರೂಪಾಯಿ ಗ್ರಾಂಟ್ ಕೊಟ್ಟಿದೆ.

ಶ್ರೀ ಎನ್. ನಂಜೇಗೌಡ.—ಎಷ್ಟು ಮನೆಗಳಿಗೆ ಕೊಟ್ಟಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—39.

ಶ್ರೀ ಎನ್. ನಂಜೇಗೌಡ.—62 ಮನೆಗಳಿಗೆ ಗ್ರಾಂಟ್ ಕೊಟ್ಟಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಒಂದು ಕಾಲೊನಿಗೆ ಇಷ್ಟು ಅಂತ ಗ್ರಾಂಟ್ ಕೊಡುತ್ತೇವೆ, ಅದರಲ್ಲಿ ಎಷ್ಟು ಉಪಯೋಗ ಮಾಡಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎನ್. ನಂಜೇಗೌಡ.—ಒಟ್ಟು 39 ಸಂಸಾರ ಇವೆ ಎಂದು ಹೇಳಿದ್ದೀರಿ, 59 ಜೊತೆ ಎತ್ತು ಕೊಟ್ಟಿದ್ದೀರಿ, ಇನ್ನು 20 ಜೊತೆ ಎತ್ತು ಯಾರಿಗೆ ಕೊಟ್ಟಿದ್ದೀರಿ ?

ಶ್ರೀಮತಿ ಯಶೋಧರ ದಾಸಪ್ಪ.—ಬೇರೆಯವರು ಯಾರಾದರೂ ತೆಗೆದುಕೊಂಡಿರಬಹುದು.

ಶ್ರೀ ಬಿ. ಚನ್ನಬ್ಯೆರೇಗೌಡ.—59 ಜೊತೆ ಎತ್ತುಗಳನ್ನು ಕೊಟ್ಟಿದ್ದೀರಿ. ಈ ಕಾಲೊನಿಯಲ್ಲಿ ಕೊಟ್ಟಿರುವ ವ್ಯವಸಾಯದ ಮಟ್ಟುಗಳು ಸರಿಯಾಗಿ ಉಪಯೋಗವಾಗುತ್ತಾ ಇದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ತಾವೆಲ್ಲರೂ ಆ ವಿಚಾರ ತಿಳಿದು ನಮಗೆ ಹೇಳ ಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—39 ಮನೆಗಳಿಗೆ ದುಡ್ಡು ಕೊಟ್ಟಿದ್ದೇವೆ ಎಂದು ಹೇಳಿದಿರಿ. 62 ಮನೆಗಳಿಗೆ ದುಡ್ಡು ಕೊಡಲಾಗಿದೆ ಎಂದು ಹೇಳಿದಾಗ ಅದು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಹೇಳಿದಿರಿ ಅದು ಸರಿಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಅಲ್ಲಿ ಇರುವುದು 39 ಸಂಸಾರಗಳು.

ಶ್ರೀ ಟಿ. ಮಾದಯ್ಯ ಗೌಡ.—ಈ ಅಗ್ರಿಕಲ್ಚರರ್ ಕಾಲೋನಿಯಲ್ಲಿ ಅವರಿಗೆ ಬೇಕಾದಂತಹ ಸೌಕರ್ಯ ಮಾಡಿಕೊಡುತ್ತಾ ಇರುವುದನ್ನು ಅವರು ಹೇಗೆ ಉಪಯೋಗಿಸಿಕೊಳ್ಳುತ್ತಾ ಇದ್ದಾರೆ, ಅದರಿಂದ ಅವರು ಪ್ರಯೋಜನ ಹೊಂದುತ್ತಾ ಇದ್ದಾರೆಯೇ ಎಂದು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೆ ವಿಚಾರ ಮಾಡುವವರು ಇದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಡೆಪ್ಯೂಟಿ ಕಮಿಷನರು, ಬಿ. ಡಿ. ಓ., ತಾಲ್ಲೂಕು ಬೋರ್ಡಿನವರು ಎಲ್ಲರೂ ಇದ್ದಾರೆ, ಸೋಷಿಯಲ್ ವೆಲ್‌ಫೇರ್ ಬೋರ್ಡ್ ಇನ್‌ಸ್ಪೆಕ್ಟರುಗಳು, ಆಫೀಸರುಗಳು ಇರುತ್ತಾರೆ. ಅವರ ಮುಖೇನ ಈ ಹಣವನ್ನು ಹಂಚಿರಾಗುತ್ತದೆ, ಮತ್ತು ಅವರು ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಲ್ಲರುವುದು 39 ಸಂಸಾರಗಳಾದರೂ ಕೂಡ 59 ಜೊತೆ ಎತ್ತುಗಳನ್ನು ಕೊಟ್ಟಿದ್ದೀರಿ. ಯಾರಿಗೆ ಕೊಟ್ಟಿದ್ದೀರಿ ಎಂದರೆ ಯಾರಿಗೋ ಕೊಟ್ಟರಬೇಕು ಎಂದರೆ ಅದರ ಅರ್ಥವೇನು ?

ಶ್ರೀಮತಿ ಯಶೋಧರ ದಾಸಪ್ಪ.—ಆ ಕಾಲೋನಿಯಲ್ಲಿ ಇರುವವರು 39 ಜನ. ಅಲ್ಲಿ ಬೇರೆಯವರು ಯಾರಾದರೂ ಇದ್ದರೆ ಅವರಿಗೂ ಕೊಟ್ಟಿರಬಹುದು.

ಶ್ರೀ ಕೆ. ಎ. ಬೈರೇಗೌಡ.—304 ಎಕರೆ ಖುಷ್ಕಿ ಜಮೀನು ಇದೆ ಎಂದು ಹೇಳಿದ್ದೀರಿ. ತರೀ ಜಮೀನು ಇದೆಯೆ ? ಹಾಗೆ ಇಲ್ಲದೇ ಇದ್ದರೆ ಅವರಿಗೆ ನೀರಾವರಿಗೆ ಬೇರೆ ಏನಾದರೂ ಅನುಕೂಲ ಮಾಡಿದ್ದೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ನೀರಾವರಿಗೆ ಅನುಕೂಲ ಮಾಡಿಕೊಟ್ಟಿಲ್ಲ, ಅಷ್ಟು ಜಮೀನಿನಲ್ಲಿ ಅವರು ಸಾಗುವಳಿ ಮಾಡಿರುವುದು 74 ಎಕರೆ ಮಾತ್ರ.

ಶ್ರೀ ಇ. ನಾರಾಯಣ ಗೌಡ.—304 ಎಕರೆಯಲ್ಲಿ ಎಷ್ಟು ಉತ್ಪನ್ನವಾಗುತ್ತಾ ಇದೆ ?

ಶ್ರೀಮತಿ ಯಶೋಧರ ದಾಸಪ್ಪ.—ಈಗ ಹಾಲೆ ಇರುವವರು 39 ಸಂಸಾರಗಳು, 304 ಎಕರೆಯಲ್ಲಿ ಅವರು 74 ಎಕರೆ ಮಾತ್ರ ಸಾಗುವಳಿ ಮಾಡುತ್ತಾ ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕಾಲೋನಿ ಮಾಡಿದಾಗ ಯಾರ್ಯಾರು ಅಲ್ಲಿಗೆ ಬರುತ್ತಾರೋ ಅವರೆಲ್ಲರೂ ಅಲ್ಲೇ ವಾಸ ಇರಬೇಕೆಂಬ ನಿರ್ಬಂಧ ಇದೆಯಲ್ಲವೇ! ಆ ರೀತಿ ಅಲ್ಲಿ ವಾಸವಾಗಿಲ್ಲದೇ ಇರುವವರಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ನಿರ್ಬಂಧ ಏನೂ ಇಲ್ಲ.

ಶ್ರೀ ಕೆ. ಎ. ಬೈರೇಗೌಡ.—ಈ ಜಮೀನೆಲ್ಲಾ ಕೇವಲ ಖುಷ್ಕಿ ಇರುವುದರಿಂದ ಅವರಿಗೆ ಸಾಕಾದಷ್ಟು ಬೆಳೆಯುವ ನಂಬಿಕೆ ಇರುವುದಿಲ್ಲ. ನೀರಾವರಿಗೆ ಏನೂ ಅನುಕೂಲ ಮಾಡಿಲ್ಲ ಎಂದಿರಿ. ಇದರಿಂದ ಅವರು ಅಲ್ಲಿ ವಾಸ ಮಾಡುವುದಕ್ಕೆ ತೊಂದರೆಯಾಗುವುದಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಬೇರೆ ಮಾರ್ಗದಿಂದ ವ್ಯವಸಾಯಕ್ಕೆ ನೀರಾವರಿ ಸಹಾಯವನ್ನು ಪಡೆಯಬಹುದು.

ಶ್ರೀ ಎನ್. ನಂಜೇಗೌಡ.—ಜಮೀನು ಯಾವುದೂ ಪರಭಾರೆಯಾಗಿಲ್ಲ ಎಂದು ಹೇಳಿದ್ದೀರಿ. ತರೀ ಜಮೀನು ಬೆಳ್ಳಿಬೆಟ್ಟದಹಳ್ಳಿಯಲ್ಲಿ ಪರಭಾರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಆ ರೀತಿ ಆಗಿಲ್ಲ ಎಂದು ಹೇಳಿದ್ದಾರೆ, ಆ ರೀತಿ ಏನಾದರೂ ಆಗಿದ್ದರೆ ಅದನ್ನು ಸರಕಾರದವರ ಗಮನಕ್ಕೆ ತಂದರೆ, ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—59 ಜೊತೆ ಎತ್ತು ಕೊಟ್ಟಿದೆ ಎಂದು ಹೇಳಿದ್ದೀರಿ, ಒಂದು ಜೊತೆ ಎತ್ತಿಗೆ ಎಷ್ಟು ಹಣವನ್ನು ಒದಗಿಸಿದ್ದಿರಿ ? ಒಟ್ಟು ಮೊಬಲಗು ಎಷ್ಟು ?

ಶ್ರೀಮತಿ ಯಶೋಧರ ದಾಸಪ್ಪ.—ಒಂದು ಜೊತೆ ಎತ್ತಿಗೆ 300 ರೂಪಾಯಿನಂತೆ ಕೊಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—39 ಸಂಸಾರಗಳು ಇದ್ದು, 59 ಜೊತೆ ಎತ್ತುಗಳನ್ನು ಕೊಟ್ಟಿದ್ದೀರಿ ಎಂದರೆ ಒಂದು ಮನೆಯಲ್ಲಿ 3-4 ಜನರ ಹೆಸರಿನಲ್ಲಿ ಎತ್ತುಗಳನ್ನು ತೆಗೆದುಕೊಂಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ತಮ್ಮ ಗಮನಕ್ಕೆ ತರುವುದಾದರೆ ಅಲ್ಲಿ 59 ಸಂಸಾರಗಳು ಇರಬೇಕೆಂದು ಗೊತ್ತು ಮಾಡಿ 59 ಜೊತೆ ಎತ್ತುಗಳನ್ನು ಕೊಟ್ಟಿದ್ದೆವು, ಈಗ ಹಾಲೆ 39 ಸಂಸಾರಗಳು ಮಾತ್ರ ಇವೆ ಆದರೆ 59 ಜೊತೆ ಎತ್ತುಗಳನ್ನೂ ತೆಗೆದುಕೊಂಡಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಈಗ ಇವ್ಯಾಲ್ಯುಯೇಷನ್ ಆಫೀಸರನ್ನು ಗೊತ್ತು ಮಾಡಿದ್ದೇವೆ. ಅವರು ಅಲ್ಲಿ ಯಾವ ರೀತಿ ನಡೆಯುತ್ತಾ ಇದೆ, ಕೊಟ್ಟಿರತಕ್ಕ ಸೌಲಭ್ಯಗಳು ಯಾವ ರೀತಿ ಉಪಯೋಗವಾಗುತ್ತ ಇದೆ, ಸದುಪಯೋಗವಾಗಿದೆಯೇ, ದುರುಪಯೋಗವಾಗಿದೆಯೇ ಎಂಬುದನ್ನು ಸರಕಾರದವರ ಗಮನಕ್ಕೆ ತರುತ್ತಾರೆ. ಅದನ್ನು ಇನ್ನು ಸ್ವಲ್ಪದಿನದಲ್ಲೇ ಪ್ರಿಂಟ್ ಮಾಡಿಸಿ ತಮ್ಮೆಲ್ಲರ ಗಮನಕ್ಕೆ ತರುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೇವಲ 74 ಎಕರೆ ಸಾಗುವಳಿಗೆ 50 ಸಾವಿರ ರೂಪಾಯಿ ಖರ್ಚಾಗಿದೆ ಎಂದು ಹೇಳಿದರು. ಹಾಗಾದರೆ ಖರ್ಚಿಗೆ ತಕ್ಕ ಉತ್ಪತ್ತಿಯಿಲ್ಲವೆಂಬುದು ಅರ್ಥ ವಾಗುವುದಿಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಅದನ್ನು ಹೇಳಲು ಸಾಧ್ಯವಿಲ್ಲ. ಈ ಕಾಲೋನಿ 1953 ರಿಂದ ನಡೆಯುತ್ತಿದೆ, ವರ್ಷ ವರ್ಷ ಬೇಕಾದ ಸಲಕರಣೆಗಳನ್ನು ಕೊಡಲಾಗುತ್ತಿದೆ. ಯಾವ ರೀತಿ ನಡೆಯುತ್ತಿದೆ ಎಂದು ಸ್ವಳದ ಮುಖಂಡರು ತಿಳಿದುಬಂದು ನಮಗೆ ತಿಳಿಸಿದರೆ ಲೋಪಗಳಿದ್ದರೆ ಸರಿಪಡಿಸಬಹುದು. ಈಗ ನಮಗೆ ಬಂದಿರುವ ವರದಿ ಪ್ರಕಾರ ಸರಿಯಾಗಿ ನಡೆಯುತ್ತಿದೆ ಎಂದು ತಿಳಿದುಬಂದಿದೆ.

ಶ್ರೀ ಎನ್. ನಂಜೇಗೌಡ.—ಈ ಕಾಲೋನಿಗೆ ಸಮಾಜ ಕಲ್ಯಾಣಶಾಖಾ ಉಪ ಸಚಿವರು ದಯ ಮಾಡಿಸಿದ್ದಾಗ ಅಲ್ಲಿ ಕೊಟ್ಟಿದ್ದ ಜಮೀನು ಪರಭಾರೆಯಾಗಿರುವ ವಿಷಯವನ್ನು ಗಮನಕ್ಕೆ ತಂದಾಗ ಮುಖಂಡರನ್ನು ಬಹಳ ಬುದ್ಧಿವಂತಿಕೆಯಿಂದ ಬರಮಾಡಿಕೊಂಡು ವಿಚಾರಮಾಡಿ ವಾಪಸು ಬಂದರು. ಆಮೇಲೆ ಏನು ಕ್ರಮ ಕೈಕೊಂಡರು ?

ಶ್ರೀಮತಿ ಯಶೋಧರ ದಾಸಪ್ಪ.—ಅನೇಕ ಜಮೀನುಗಳು ದರಖಾಸ್ತು ಮೂಲಕ ಕೊಟ್ಟಿರುವುದು ಪರಭಾರೆಯಾಗಿವೆ. ಆದರೆ ಈಗಿರುವ ಕಾನೂನು ಪ್ರಕಾರ ಜಮೀನನ್ನು ಬರೆಸಿಕೊಂಡಿರುವ ಬೇರೆಯವರಮೇಲೆ ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದುದರಿಂದ ಸ್ಪೆಷಲ್ಲಾಗಿ ಕಾನೂನು ತಿದ್ದುಪಡಿಮಾಡಿ ಕ್ರಮ ತೆಗೆದುಕೊಳ್ಳಲು ಅವಕಾಶವಾಗುವಂತೆ ಈ ಸಭೆ ತೀರ್ಮಾನಮಾಡಬೇಕಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಕಳೆದ 11 ವರ್ಷಗಳಿಂದ ಆ ಕಾಲೋನಿಯಲ್ಲಾಗಿರುವ ಬೆಳೆ ಎಷ್ಟು ?

ಶ್ರೀಮತಿ ಯಶೋಧರ ದಾಸಪ್ಪ.—ಆ ಸಮಾಚಾರ ಇಲ್ಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಉಪಮಂತ್ರಿಗಳು ಸಂಚಾರ ಹೋಗಿಬಂದಮೇಲೆ ಕುಂದು ಕೊರತೆಗಳನ್ನು ತಮಗೆ ನಿವೇದನೆ ಮಾಡಿದರೇ ? ಮಾಡದಿದ್ದರೆ ಕಾರಣವೇನು ?

ಶ್ರೀ ಕೆ. ಪ್ರಭಾಕರ್.—ನನ್ನ ಗಮನಕ್ಕೆ ಬಂದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಅದನ್ನು ಸರಿಯಾಗಿ ವಿಚಾರಮಾಡಿ ವರದಿಮಾಡಬೇಕೆಂದು ತಿಳಿಸಿದೆ. ಇನ್ನೂ ವರದಿ ಬಂದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಅಲ್ಲಿರುವವರಿಗೆ ಅನುಕೂಲವಾಗುವಂತೆ ಪಿಕಪ್ ಅಥವ ಅಣೆಕಟ್ಟು ಕಟ್ಟಿಸಿ ನೀರಾವರಿ ವ್ಯವಸಾಯಕ್ಕೆ ಅನುಕೂಲಮಾಡುವಿರಾ ?

ಶ್ರೀಮತಿ ಯಶೋಧರ ದಾಸಪ್ಪ.—ವ್ಯವಸಾಯದ ಇಲಾಖೆ ಡೆವಲಪ್‌ಮೆಂಟ್ ಆಕ್ಟಿವಿಟೀಸನ್ನು ಈಗ ಕೈಗೊಂಡಿದೆ. ಆ ಇಲಾಖೆಯವರನ್ನು ವಿಚಾರಮಾಡಿ ಪ್ರಯತ್ನಮಾಡುತ್ತೇವೆ.

ಶ್ರೀ ಎನ್. ನಂಜೇಗೌಡ.—ಸದರಿ ಕಾಲೋನಿಯಲ್ಲಿ 18 ಮನೆ ಮಾತ್ರ ಆಗಿವೆ, ಉಳಿದುವೆಲ್ಲಾ ಹುಲ್ಲಿನ ಷೆಡ್ಡುಗಳು ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಜನರಲ್ಲಾಗಿ ಹೇಳುವುದಾದರೆ ಮನೆಗಳು, ಕಮ್ಯೂನಿಟಿ ಸೆಂಟರಿನ ಆಪ್ರೋಚ್ ರಸ್ತೆಗಳು, ಬಾವಿಗಳು ಮುಂತಾದುವಕ್ಕೆ ಹಣ ಕೊಟ್ಟರೆ ಅರ್ಧ ಕೆಲಸಮಾಡಿ ನಿಲ್ಲಿಸಿಬಿಡುತ್ತಾರೆ. ಎಕನಾಮಿಕ್ ಏಡ್ ಕೊಡುವುದು ಮಾತ್ರ ಸಂಪೂರ್ಣವಾಗಿ ಖರ್ಚಾಗುತ್ತದೆ. ಯಾವ ರೀತಿ ಈ ಸಮಸ್ಯೆಯನ್ನು ಪರಿಹಾರಮಾಡಬೇಕೆಂದು ಯೋಚನೆಮಾಡುತ್ತಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—300 ರೂಪಾಯಿಗಳಿಗೆ ಒಂದು ಜೊತೆ ಎತ್ತು ಸಿಕ್ಕುವುದಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಇದುವರೆಗೆ ಅಷ್ಟಕ್ಕೆ ದೊರೆಯುವುದೆಂದು ತೀರ್ಮಾನ ವಾಗಿರುವ ಪ್ರಕಾರ ಕೊಡಲಾಗುತ್ತಿದೆ.

ಶ್ರೀ ಅಂದಾನಯ್ಯ.—ಅಲ್ಲಿ ಇದುವರೆಗೆ ಸುಧಾರಣೆಯಾಗಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ತಾವು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇದುವರೆಗೆ ಸಾಮೂಹಿಕ ವ್ಯವಸಾಯದಿಂದ ಸರಿಯಾದ ಪ್ರಯೋಜನವಾಗದಿರುವುದರಿಂದ ಅದನ್ನು ಇನ್ನು ಮುಂದಾದರೂ ನಿಲ್ಲಿಸುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಅದನ್ನು ನಿಲ್ಲಿಸುವುದು ಸರಿಯಲ್ಲ. ನ್ಯೂನತೆ ಇದ್ದರೆ ಸರಿಪಡಿಸಬೇಕಾಗುತ್ತದೆ. ಇದರಿಂದ ಜನರಿಗೆ ಒಳ್ಳೆಯದಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದೇ ಮನೆಯವರು, ಅಣ್ಣ, ತಮ್ಮ, ಮಗ, ಚಿಕ್ಕಪ್ಪ ಹೀಗೆ ಬೇರೆಬೇರೆಯವರು ಬೇರೆಬೇರೆಯಾಗಿ ಹಣ ತೆಗೆದುಕೊಂಡಿರುವುದರಿಂದ 39 ಮನೆಗಳಿಗೆ ಹಣ ಕೊಟ್ಟರೂ 18 ಮನೆಗಳಾಗಿನೆಯಲ್ಲವೇ ?

ಶ್ರೀಮತಿ ಯಶೋಧರ ದಾಸಪ್ಪ.—ಹಾಗಲ್ಲ, ಕಾಲೋನಿಯನ್ನು ಮಾಡಿದಾಗ ಜಮೀನಿಗೆ ನೀರಾವರಿ ಅನುಕೂಲತೆ, ಸರಿಯಾದ ಸ್ಥಳ ಕೊಟ್ಟಿದ್ದರೆ ಜನ ಸಾಕಷ್ಟು ಬರುತ್ತಿದ್ದರು. ಈಗ ಕೊಡುವ ಎಕನಾಮಿಕ್ ಏಡ್ ಸಾಲದು. ಆದರಿಂದ ಜೀವನ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕೆಲವರು ಅಲ್ಲಿಗೆ ಬರಲು ಇಷ್ಟಪಡುವುದಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಪ್ರಕಾರ ಹಣ ಕೊಟ್ಟಿದ್ದನ್ನು ಖರ್ಚುಮಾಡಿ 116 ಕಾಲೋನಿಗಳನ್ನು ಮಾಡಲಾಯ್ತು. ಆದರೆ ಜನರಿಗೆ ಬೇಕಾದ ನೀರಾವರಿ ಸೌಕರ್ಯ ಮುಂತಾದನ್ನು ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಕೆಲವು ಕಾಲೋನಿಗಳು ಸರಿಯಾಗಿಲ್ಲ ಆದರೆ ಎಲ್ಲಾ ಕಾಲೋನಿಗಳಿಗೂ ಸರ್ಕಾರದಿಂದ ಸಹಾಯ ದೊರೆತು ಜನರೆಲ್ಲಾ ಒಂದು ಕಡೆ ಸೇರುವುದರಿಂದ ಜನರಿಗೆ ಒಳ್ಳೆಯದಾಗುತ್ತದೆಂಬ ನಂಬಿಕೆ ಇದೆ.

ಶ್ರೀ ಬಿ. ಚನ್ನಬ್ಯೆರೇಗೌಡ.—ನ್ಯೂನತೆಗಳನ್ನು ನೋಡಿ ಸರಿಪಡಿಸುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಸರಿಪಡಿಸುತ್ತೇವೆ.

Total Provision and Outlay during the II Plan Period for the Animal Husbandry

*Q.—109. **Sri S. RUDRAPPA** (Kalgi).—

Will the Government be pleased to state :—

(*a*) what is the total provision made in the II Plan period, for the Animal Husbandry and the total outlay;

(*b*) the amount spent on the above in the Revenue Divisions of Bangalore, Mysore, Belgaum and Gulbarga during the II Plan period

A.—**Sri M. V. KRISHNAPPA** (Minister for Revenue).—

(*a*) —	*Provision* (Rs. in lakhs)	*Expenditure* (Rs. in lakhs)
(i) Animal Husbandry	134.00	77.350
(ii) Dairying	48.00	15.671

(*b*) —	*Animal Husbandry* (Rs. in lakhs)	*Daiying* (Rs. in lakhs)
Bangalore Division	48.935	4.701
Mysore Divison	12.913	6.645
Belgaum Division	10.287	4.315
Gulbarga Division	5.215	nil.

ಶ್ರೀ ಎಸ್. ರುದ್ರಪ್ಪ.—ಎರಡನೆಯ ಯೋಜನಾವಧಿಯಲ್ಲಿ ಗುಲ್ಬರ್ಗ ವಿಭಾಗದಲ್ಲಿ ಖರ್ಚೇ ಇಲ್ಲದಿರುವುದನ್ನು ನೋಡಿದರೆ ಅದನ್ನು ಅಲಕ್ಷಮಾಡಿರುವುದು ವ್ಯಕ್ತವಾಗುವುದಿಲ್ಲವೆ ?

ಶ್ರೀ ಎಂ. ವಿ ಕೃಷ್ಣಪ್ಪ.—ಎರಡನೆಯ ಯೋಜನೆಯಲ್ಲಿ ಆಗಿಲ್ಲವಿರುವುದನ್ನು ಮೂರನೆ ಯೋಜನೆಯಲ್ಲಿ ಮಾಡಿ ಕಾಂಪೆನ್ಸೇಟ್ ಮಾಡುತ್ತೇವೆ. ಹಾಗಾಗುವುದಕ್ಕೆ ಕಾರಣ ಕೆಲವು ಸ್ಕೀಮುಗಳನು ತೆಗೆದುಕೊಳುವುದಕ್ಕೆ ಅವಕಾಶವಾಗುವುದಿಲ್ಲ. ಬೆಂಗಳೂರು ಡಿವಿಜನ್ನಿನಲ್ಲಿ ಹೆಚ್ಚು ಖರ್ಚಾಗವುದಕ್ಕೆ ಕಾರಣ ವೆಟರ್ನರಿ ಕಾಲೇಜನ್ನು ತೆರೆಯಬೇಕಾಯಿತು, ಅದಕ್ಕೆ 45 ಲಕ್ಷ ರೂಪಾಯಿ ಖರ್ಚಾಯಿತು ಅಂಥ ಕಾಲೇಜನ್ನು ಎಲ್ಲ ಡಿವಿಜನ್ನುಗಳಲ್ಲೂ ತೆರೆಯುವುದಕ್ಕಾಗುವುದಿಲ್ಲ. ಆದರೆ ಅದಕ್ಕೆ ಎಲ್ಲಾ ಡಿವಿಜನ್ನುಗಳ ಹುಡುಗರು ಬರುತ್ತಾರೆ.